ಓ ಎಸ್ ನಂಃ 204/2021
ಪಿ. ಡಬ್ಲ್ಯೂ-1

**(ಇಂದು ದಿನಾಂಕ 20-01-2026 ರಂದು ಮಧ್ಯಂತರ ಅರ್ಜಿ ನಂಃ 16 ಮತ್ತು 17 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ನಂಃ 1 ರವರ ಪರ ಶ್ರೀ ಜಿ ಜಿ ಜಿ ವಕೀಲರಿಂದ**

ನಾನು 07 ನೇ ತರಗತಿವರೆಗೆ ಶಿಕ್ಷಣ ಪಡೆದಿದ್ದು, ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದಾವಾವನ್ನು ಯಾವ ಸ್ವತ್ತಿನ ಕುರಿತು ಮತ್ತು ಯಾವ ಕಾರಣಕ್ಕಾಗಿ ದಾಖಲು ಮಾಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಈ ದಾವಾವನ್ನು ಸರ್ವೆ ನಂಃ 988, ಸರ್ವೆ ನಂಃ 989 , ಸರ್ವೆ ನಂಃ 136 ಮತ್ತು ಮನೆ ನಂಃ 175 ಮತ್ತು 176 ಕುರಿತು ಮಾಡಿದ್ದೇನೆ. ನನ್ನ ಪರವಾಗಿ ಮರಣ ಉತಾರ ಮತ್ತು ಹೊಲದ ಉತಾರ ಹಾಜರುಪಡಿಸಿದ್ದೇನೆ. ನಾನು ನನ್ನ ಪರವಾಗಿ ಸರ್ವೆ ನಂಃ 988, ಸರ್ವೆ ನಂಃ 989 ರ ಕುರಿತು ಯಾವುದೇ ದಾಖಲು ಹಾಜರುಪಡಿಸಿಲ್ಲ ಎಂದರೆ ಸರಿ. ಸರ್ವೆ ನಂಃ 988, ಸರ್ವೆ ನಂಃ 989 ರ ಆಸ್ತಿಗಳು ಎಷ್ಟು ವಿಭಾಗವಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರವನ್ನು ತಯಾರಿಸಲು ನನ್ನ ವಕೀಲರು ಮಾಹಿತಿ ಕೊಟ್ಟಿದ್ದಾರೆ. ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಕೇಳಿ ತಿಳಿದುಕೊಳ್ಳಲಿಲ್ಲ. ದಾವಾ ಅನುಸೂಚಿ 'ಎ' ಮತ್ತು 'ಬಿ' ಯಲ್ಲಿ ಏನು ಇದೆ ಎಂದು ನಿಮಗೆ ಹೇಳಲು ಆಗುತ್ತದೆಯೇ ಎಂದು ಕೇಳಿದರೆ ಸಾಕ್ಷಿಯು ಉತ್ತರಿಸುವುದಿಲ್ಲ. ದಾವಾ ಸ್ವತ್ತುಗಳು ಗಂಗಪ್ಪ ಶೆಟ್ಟೆಪ್ಪ ಹರ್ಪನಿ ಇವರಿಗೆ ಸೇರಿದೆ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ. ಚಿಕ್ಕಮಲ್ಲಿಗವಾಡ ಗ್ರಾಮದ ಸರ್ವೆ ನಂಃ 71/ಬಿ ರ ಆಸ್ತಿಯ ಕುರಿತು

ನನಗೆ ಮಾಹಿತಿ ಇಲ್ಲ . ಸಾಕ್ಷಿಯು ಅದು ಸರ್ವೆ ನಂ: 136 ಎಂದು ಸ್ವತಃ ಹೇಳುತ್ತಾರೆ . ಚಿಕ್ಕಮಲ್ಲಿಗವಾಡ ಗ್ರಾಮದ ಸರ್ವೆ ನಂ: 71/ಬಿ ರ ಸ್ವತ್ತು ಸರ್ವೆ ನಂ: 136 ಸ್ವತ್ತು ಎರಡೂ ಒಂದೇ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದಿರಿ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಸರ್ವೆ ನಂ: 71/ಬಿ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿದೆ ಎಂದರೆ ನನಗೆ ಮಾಹಿತಿ ಇಲ್ಲ . ಸರ್ವೆ ನಂ: 989 ರ ಅಮ್ಮಿನಬಾವಿ ಗ್ರಾಮದಲ್ಲಿ ಇದೆ ಎಂದರೆ ಸರಿ . ಸರ್ವೆ ನಂ: 71/ಬಿ **ಮತ್ತು** ಸರ್ವೆ ನಂ: 989/1 ಇವೆರಡೂ ಆಸ್ತಿಗಳು ಒಂದೇ ಆಗಿರುತ್ತವೆ . ಸರ್ವೆ ನಂ: 71/ಬಿ **ಮತ್ತು** ಸರ್ವೆ ನಂ: 989/1 ಇವೆರಡೂ ಆಸ್ತಿಗಳು ಒಂದೇ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ನಾನು ಈ ದಾವೆಯಲ್ಲಿ ನಮ್ಮ ಕುಟುಂಬದ ಸದಸ್ಯರ ವಂಶಾವಳಿ ಸಲ್ಲಿಸಿದ್ದೇನೆ . ಸದರಿ ವಂಶಾವಳಿ ಪ್ರಕಾರ ಗಂಗಪ್ಪ ಇವರು ನಮ್ಮ ಕುಟುಂಬದ ಮೂಲ ಪುರುಷ ಎಂದು ಹೇಳಿಕೊಂಡಿದ್ದೇನೆ . ಸದರಿ ವಂಶಾವಳಿಯಲ್ಲಿ ಪೋತಿ ಶೆಟ್ಟಪ್ಪ ಮತ್ತು ಪೋತಿ ಭೀಮನಗೌಡ ಇವರನ್ನು ಕಾಣಿಸಿಲ್ಲ ಎಂದರೆ ಸರಿ . ಶೆಟ್ಟಪ್ಪ ಮತ್ತು ಭೀಮನಗೌಡ ಇವರಿಗೆ ಗಂಗಪ್ಪನೇ ವಾರಸುದಾರ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಭೀಮನಗೌಡ ಇವರಿಗೆ ಶಂಕ್ರವ್ವ ಎನ್ನುವವರು ಪತ್ನಿಯಾಗಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಮರಣ ಉತಾರ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ . ಮರಣ ಉತಾರ ಅನ್ವಯ ಭೀಮನಗೌಡ ಮತ್ತು ಶಂಕ್ರವ್ವ ಇವರ ಸಂಬಂಧ ನಿರ್ಧರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಶೆಟ್ಟಪ್ಪ ಮತ್ತು ಭೀಮನಗೌಡ ಇವರು ಚಿಕ್ಕಮಲ್ಲಿಗವಾಡ ಗ್ರಾಮದ ಹಾವೇರಿಪೇಟೆಯಲ್ಲಿ ಇದ್ದರು . ಶೆಟ್ಟಪ್ಪ ಮತ್ತು ಭೀಮನಗೌಡ ಇವರು ಚಿಕ್ಕಮಲ್ಲಿಗವಾಡ ಗ್ರಾಮದ ಹಾವೇರಿಪೇಟೆಯಲ್ಲಿ ಇದ್ದರು ಎಂದು

ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಶೆಟ್ಟೆಪ್ಪ ಮತ್ತು ಭೀಮನಗೌಡ ಇವರು ಸರ್ವೆ ನಂಃ 989 , 88 ಮತ್ತು ಸರ್ವೆ ನಂಃ 136 ಸಾಗು ಮಾಡುತ್ತಿದ್ದರು . ಸರ್ವೆ ನಂಃ 88 ರ ಕುರಿತು ನಿಮ್ಮ ವಾದ ಪತ್ರದಲ್ಲಿ ಏನು ಹೇಳಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಭೀಮನಗೌಡ ಇವರು ಶೆಟ್ಟೆಪ್ಪ ಇವರ ಮಗ ಇರುತ್ತಾನೆ . ಸದರಿಯವರ ಸಂಬಂಧವನ್ನು ತೋರಿಸುವ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಭೀಮನಗೌಡ ಇವರ ಹೆಂಡತಿಯ ಹೆಸರು ಶಂಕ್ರವ್ವ . ಭೀಮನಗೌಡ ಮತ್ತು ಶಂಕ್ರವ್ವ ಇವರಿಗೆ ಸಂತಾನ ಇರಲಿಲ್ಲ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ .

**ಪ್ರತಿವಾದಿ ನಂಃ 1 ರವರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದುಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.